ಪ್ರಕಟಣೆ :
ವೃಕ್ಷಲಕ್ಷ ಆಂದೋಲನ ಕರ್ನಾಟಕ
ಸಾಗರ (ಶಿವಮೊಗ್ಗ ಜಿಲ್ಲೆ)
ದೂರವಾಣಿ : 9449363350
ನವೆಂಬರ್ 2013

# ಹಸಿರುಹೆಜ್ಜೆ

## ಪಶ್ಚಿಮಘಟ್ಟದ ವಾರ್ತಾ ಪತ್ರ

ಸಹಕಾರ :
ಗ್ರಾಮ ಅರಣ್ಯ ಸಮಿತಿ
ಅಗಸಾಲ ಬೊಮ್ಮನಳ್ಳಿ,
ತಾ: ಶಿರಸಿ (ಉ.ಕ)



ಪೂಜ್ಯ ಸ್ವರ್ಣವಲ್ಲೀ ಶ್ರೀಗಳಿಂದ
ಗ್ರಾಮ ಅರಣ್ಯ ಸಮಿತಿ ಅಗಸಾಲ ಬೊಮ್ಮನಳ್ಳಿ, ಇವರಿಗೆ ಸನ್ಮಾನ

## ವಿಶಿಷ್ಟ ಗ್ರಾಮ ವಿಕಾಸ ಕಾರ್ಯದಲ್ಲಿ ಅಗಸಾಲ ಬೊಮ್ಮನಳ್ಳಿ ಗ್ರಾಮ ಅರಣ್ಯ ಸಮಿತಿ

ಏಳು ವರ್ಷಗಳ ಹಿಂದೆ ಶಿರಸಿ ತಾಲೂಕ ಬೊಮ್ಮನಳ್ಳಿ ಪಕ್ಕದ ಕೈಲಾಸ ಗುಡ್ಡದಲ್ಲಿ ಬೀಟೆಮರ ಹಾಗೂ ಶ್ರೀಗಂಧದ ವೃಕ್ಷಗಳ ಕಳ್ಳಸಾಗಣೆ ವಿರುದ್ಧ ಪ್ರತಿಭಟನೆ ನಡೆದಾಗ ಜನ್ಮ ತಳೆದ ಅಗಸಾಲ ಬೊಮ್ಮನಳ್ಳಿ ಗ್ರಾಮ ಅರಣ್ಯ ಸಮಿತಿ (ಸ್ಥಾಪನೆ : 31-11-2006) ಇಂದು ಸಾಧನೆಯ ಹಾದಿಯಲ್ಲಿ ಗಟ್ಟಿ ಹೆಜ್ಜೆ ಇಡತೊಡಗಿದೆ. ಈ ಹಳ್ಳಿಯ ಯುವಕರು, ಮಹಿಳೆಯರ ಕ್ರಿಯಾಶೀಲತೆಯೇ ಸಾಧನೆಗೆ ಮುಖ್ಯ ಕಾರಣ.

ಈ ವಿಲೇಜ್ ಫೋರೆಸ್ಟ ಕಮೀಟಿ (ವಿ.ಎಫ್.ಸಿ) ಯ ಸದಸ್ಯರ ಸಂಖ್ಯೆ 1012. ಹೌದು, ಅಗಸಾಲ - ಬೊಮ್ಮನಳ್ಳಿ ಗ್ರಾಮದಲ್ಲಿ ನೀವು ಇಂಧನ ಸ್ವಾವಲಂಬನೆ ಕಾರ್ಯ ನೋಡಲು ಸಾಧ್ಯ. 311 ಮನೆಗಳಿಗೆ ಸೌರವಿದ್ಯುತ್ ಕಲ್ಪಿಸುವ ಯೋಜನೆ ಕಷ್ಟ ಸಾಧ್ಯ ವಿಷಯ. ಇದನ್ನು ಸಾಧಿಸಿ ಇಲ್ಲಿ ತೋರಿಸಿದ್ದಾರೆ. ನಾಟಿ ವೈದ್ಯರ ಮಾರ್ಗದರ್ಶನ ಪಡೆದು ಹಸಿರು ಆರೋಗ್ಯ ಶಿಬಿರ ನಡೆಸುವ ವಾರ್ಷಿಕ ಕಾರ್ಯಕ್ರಮ ಬಹು ಉಪಯುಕ್ತ ಎನಿಸಿದೆ. ಜಿಲ್ಲೆಯ ವಿವಿಧ ತಾಲೂಕುಗಳ ಆಸಕ್ತರು ಹಸಿರು ಆರೋಗ್ಯ ಶಿಬಿರಕ್ಕೆ ಆಗಮಿಸುತ್ತಾರೆ! ಇತ್ತೀಚಿಗೆ ಗ್ರಾಮದಲ್ಲಿ ನಡೆದ ಹಸಿರು ಆರೋಗ್ಯ ಶಿಬಿರದಲ್ಲಿ ಖ್ಯಾತ ಬೆಳ್ಳಂಬರ ವೈದ್ಯ ಶ್ರೀ ಹನುಮಂತ ಬೊಮ್ಮು ಗೌಡ ಅವರನ್ನು ಸನ್ಮಾನ ಮಾಡಿದ್ದು ಉಲ್ಲೇಖನೀಯ.

**ಪರಿಸರ ಜಾಗೃತಿ:** ಗ್ರಾಮದ ಮಕ್ಕಳಿಗೆ ಪರಿಸರ ಯಕ್ಷಗಾನ ತರಬೇತಿ ನೀಡಲು ಅರಣ್ಯ ಸಮಿತಿ ಕಾರ್ಯಕರ್ತರು ಮುಂದಾಗಿದ್ದಾರೆ. ನಿಸರ್ಗಚಿಕಿತ್ಸಾ ಶಿಬಿರ ನಡೆಸಲು ಮುಂದಾಗಿದ್ದಾರೆ. ಸ್ವಸಹಾಯ ಸಂಘಗಳ ರಚನೆ ಗ್ರಾಮ ಮಹಿಳೆಯರ ಬಲಹೆಚ್ಚಿಸಿದೆ. ಸೋಂದಾದಲ್ಲಿ 2013 ರ ಸೆಪ್ಟೆಂಬರ್‌ನಲ್ಲಿ ಗ್ರಾಮಾಭ್ಯುದಯ ಸಂಸ್ಥೆ ಜೊತೆ ಬೃಹತ್ ಸಮ್ಮೇಳನವನ್ನೇ ಈ ವಿ.ಎಫ್.ಸಿ. ನಡೆಸಿದೆ.

(4ನೇ ಪುಟಕ್ಕೆ)

## ಸವಾಲುಗಳನ್ನು ಎದುರಿಸೋಣ

ಆತ್ಮೀಯರೆ,

ವೃಕ್ಷಲಕ್ಷ ಆಂದೋಲನದ ಇತ್ತೀಚಿನ ಚಟುವಟಿಕೆ ಹಾಗೂ ಸಾಧನೆಗಳನ್ನು ಹಂಚಿಕೊಳ್ಳುವದು ವಾರ್ತಾಪತ್ರದ ಉದ್ದೇಶ. ಕಳೆದ ಮೂರು ದಶಕಗಳಿಂದ ಮಲೆನಾಡಿನ ಪರಿಸರ ಸಂರಕ್ಷಣೆ ಹಾಗೂ ಸುಸ್ಥಿರ ಅಭಿವೃದ್ಧಿ ಕುರಿತ ಕಾರ್ಯಗಳಲ್ಲಿ ನಾವು ತೊಡಗಿಸಿಕೊಂಡಿದ್ದೇವಷ್ಟೆ? ಬಹಳಷ್ಟು ಜನ ಸಹಭಾಗಿತ್ವದ ಚಟುವಟಿಕೆಗಳನ್ನು, ಆಂದೋಲನಗಳನ್ನೂ ರೂಪಿಸಿದ್ದು ನಮ್ಮ ಹೆಮ್ಮೆ. ಆದರೆ ಅವನ್ನೆಲ್ಲ ದಾಖಲಾತಿ ಮಾಡಿದ್ದು ಕಡಿಮೆಯೇ.

ಅದರಲ್ಲೂ, ಕಳೆದ ಸುಮಾರು ಐದು ವರ್ಷಗಳಲ್ಲಿ ನನ್ನ ಬಹುಪಾಲು ಸಮಯ 'ಪಶ್ಚಿಮಘಟ್ಟ ಕಾರ್ಯಪಡೆ'ಯ ಜವಾಬ್ದಾರಿಗೇ ಮೀಸಲಿರಿಸಬೇಕಾಗಿ ಬಂತು. ಈ ಅವಧಿ ನಮಗೆ ತುಂಬಾ ಅಮೂಲ್ಯವಾಗಿತ್ತು. ನಮ್ಮ ನಾಡಿನ ಅನೇಕ ಅರಣ್ಯ-ಪರಿಸರ ಸಂಬಂಧಿ ವಿಷಯಗಳನ್ನು ಅರಿತು, ಸರ್ಕಾರದ ಉನ್ನತ ಮಟ್ಟದಲ್ಲಿ ಹಲವು ಸಮಸ್ಯೆಗಳಿಗೆ ಬಹಳ ಪರಿಣಾಮಕಾರಿ ಪರಿಹಾರ ನೀಡಬಲ್ಲ ಯೋಜನೆ ರೂಪಿಸಲು ಸಾಧ್ಯವಾಯಿತು. ಈ ದೃಷ್ಟಿಯಿಂದ ಇದೊಂದು ಜೀವಮಾನ ಅವಕಾಶವೇ ಸರಿ. ಈ ಅನುಭವದ ಆಧಾರದ ಮೇಲೆ ವೃಕ್ಷಲಕ್ಷ ಆಂದೋಲನದ ಜನಮುಖೀ ಪರಿಸರ ಸಂರಕ್ಷಣಾ ಕಾರ್ಯಗಳಿಗೆ ಇನ್ನಷ್ಟು ಬಲ ನೀಡುವ ಪ್ರಯತ್ನ ನಡೆದಿದೆ.

ಈ ವಾರ್ತಾಪತ್ರದಲ್ಲಿ ಪ್ರಮುಖವಾಗಿ ಎರಡು ಅಂಶಗಳಿವೆ. ಒಂದನೇಯದು, ಶಿರಸಿ ತಾಲ್ಲೂಕಿನ ಅಗಸಾಲ ಬೊಮ್ಮನ್ನಳ್ಳಿ ಗ್ರಾಮ ಅರಣ್ಯ ಸಮಿತಿಯ ಸಾಧನೆಗಳ ಕುರಿತಾಗಿ. ಈ ಸಂಚಿಕೆಯನ್ನು ಅವರ ಸಹಯೋಗದಲ್ಲಿಯೇ ಪ್ರಕಟಿಸುತ್ತಿದ್ದೇವೆ. ಕಳೆದ ಸುಮಾರು 8 ವರ್ಷ ಗಳಿಂದ ಈ ಗ್ರಾಮ ಅರಣ್ಯ ಸಮಿತಿ ನಡೆಸಿರುವ ಕಾರ್ಯಗಳು ನಾಡಿಗೇ ಮಾದರಿಯಾಗಿವೆ. ಜನಸಹಭಾಗಿತ್ವ ತತ್ವ ನಿಜ ಅರ್ಥ ಇಲ್ಲಿ ಅನುಷ್ಟಾನಗೊಂಡಿದೆ. ಪರಿಸರ ಸಂರಕ್ಷಣೆ ಹಾಗೂ ಗ್ರಾಮ ವಿಕಾಸದ ಸಾರ್ಥಕ ಕಾರ್ಯದಲ್ಲಿ ಪ್ರಾರಂಭದಿಂದಲೂ ಅವರ ಜೊತೆಗೆ ಕೈಜೋಡಿಸಿದ ಹೆಮ್ಮೆ ನಮ್ಮದು. ಇದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸುತ್ತ, ಅದರ ಪ್ರಮುಖ ಸಾಧನೆಗಳ ಕಿರುಪರಿಚಯ ನೀಡುತ್ತಿದ್ದೇವೆ.

ಎರಡನೇಯ ಭಾಗ, ವೃಕ್ಷಲಕ್ಷ್ಯ ಆಂದೋಲನವು ಕಳೆದ ಆರು ತಿಂಗಳಲ್ಲಿ ನಡೆಸಿದ ಚಟುವಟಿಕೆಗಳ ಕಿರು ಪಕ್ಷಿನೋಟ. ಗ್ರಾಮೀಣ ಮಟ್ಟದ ಶಿಬಿರಗಳಿಂದ ಮೊದಲ್ಗೊಂಡು ರಾಜ್ಯಮಟ್ಟದ ಸಮ್ಮೇಳನದ ವರೆಗೆ ಸಂಕ್ಷಿಪ್ತ ವರದಿ ಇಲ್ಲಿದೆ. ಗಣೇಶಪಾಲ್, ಕುಮಾರಧಾರಾದಿಂದ ಪ್ರಾರಂಭವಾಗಿ, ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಮಂತ್ರಾಲಯದವರೆಗೂ ವಿವಿಧ ಹಂತಗಳಲ್ಲಿ ನಾವು ನಡೆಸಿರುವ ಛಳುವಳಿ ಕುರಿತು ಮಾಹಿತಿ ಇಲ್ಲಿದೆ. ಜನಶಿಕ್ಷಣದ ದೃಷ್ಟಿಯಿಂದ ಬಹುಮುಖ್ಯವೆಂದು ಅರಿತು ಇವನ್ನಿಲ್ಲಿ ದಾಖಲಿಸುತ್ತಿದ್ದೇವೆ.

ಪರಿಸರ ಸಂರಕ್ಷಣೆ ಕ್ಷೇತ್ರದಲ್ಲಿ ಪ್ರತಿ ದಿನವೂ ಹೊಸ ಸವಾಲು ಹುಟ್ಟುತ್ತಲೇ ಇದೆ. ನಿರಂತರ ಸಂಘಟಿತ ಪ್ರಯತ್ನದಿಂದ ಅವನ್ನೆಲ್ಲ ಎದುರಿಸೋಣ.

ವಂದನೆಗಳು.

ಅನಂತ ಹೆಗಡೆ, ಅಶೀಸರ
ಅಧ್ಯಕ್ಷರು
ವೃಕ್ಷಲಕ್ಷ ಆಂದೋಲನ-ಕರ್ನಾಟಕ
E-mail: 1ashisar@gmail.com

# ಪಶ್ಚಿಮ ಘಟ್ಟದಲ್ಲಿ  ಕಳೆದ 6 ತಿಂಗಳಲ್ಲಿ
# ನಾವು ಹಲವು ಸಂಸ್ಥೆಗಳ ಜೊತೆ ಸಂಘಟಿಸಿರುವ ಕಾರ್ಯಕ್ರಮಗಳು :

**ಬೆಟ್ಟ ಅಭಿವೃದ್ಧಿ ಪುಸ್ತಕ ಬಿಡುಗಡೆ :** ಶ್ರೀ ಸ್ವರ್ಣವಲ್ಲಿ ಕೃಷಿಜಯಂತಿಯಲ್ಲಿ 2013 ಮೇ 22 ರಂದು ಸೋಂದಾದಲ್ಲಿ ಬೆಟ್ಟ ಅಭಿವೃದ್ಧಿ ಕುರಿತು ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಿತು. ಉತ್ತಮ ಬೆಟ್ಟ ಪ್ರಶಸ್ತಿ ನೀಡಲಾಯಿತು. ಸಮಾರಂಭದಲ್ಲಿ ಪೂಜ್ಯ ಸ್ವರ್ಣವಲ್ಲೀ ಶ್ರೀಗಳು, ಸಾನ್ನಿಧ್ಯ ವಹಿಸಿದ್ದರು. ಉತ್ತರ ಕನ್ನಡ ಜಿಲ್ಲೆಯ ಸೊಪ್ಪಿನ ಬೆಟ್ಟ ಅಭಿವೃದ್ಧಿ, ಜಾಗೃತಿ ಅಭಿಯಾನ, ಕಾನೂನು ಅಂಶಗಳು, ಮಾದರಿ ಯೋಜನೆ, ನಿಯಮ ತಿದ್ದುಪಡಿ ಪ್ರಸ್ತಾವನೆಗಳನ್ನು "ಬೆಟ್ಟ ಅಭಿವೃದ್ಧಿ" ಪುಸ್ತಕದಲ್ಲಿ ವಿವರಿಸಲಾಗಿದೆ.

**ಹಲಸಿನ ಮೇಳ:** ಹಲಸಿನಮೇಳ, ಸಸಿಸಂತೆ ಉದ್ಘಾಟನೆ, ಕದಂಬ ಮಾರ್ಕೆಟಿಂಗ್ ಶಿರಸಿಯಲ್ಲಿ ಮೇ 25-26ರಂದು ನಡೆಯಿತು. ನಿರಂತರವಾಗಿ 5 ವರ್ಷ ಹಲಸಿನಮೇಳ ನಡೆದು ರಾಜ್ಯದಲ್ಲಿ ಮಾದರಿ ಎನಿಸಿಕೊಂಡಿತು. ಹಲಸು ವೃಕ್ಷಾರೋಹಣ ಅಭಿಯಾನದ ಸಂಕಲ್ಪ ಮಾಡಲಾಯಿತು. ಸಸಿ ಸಂತೆಯನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾ ಅಧಿಕಾರಿ ಶ್ರೀ. ಬಿ.ಕೆ. ಸಿಂಗ್ ಉದ್ಘಾಟಿಸಿದರು.

**ಜಾಗತಿಕ ಪರಿಸರ ದಿನ :** ಜೂನ್ 4ರಂದು ಜಾಗತಿಕ ಪರಿಸರ ದಿನದ ಸಂದರ್ಭದಲ್ಲಿ ಯಡಳ್ಳಿ ಪರಿಸರ ವರ್ಧಿನಿಯಲ್ಲಿ ಕಟ್ಟಿಗೆ ರಹಿತ ಆಲೆಮನೆಗಳಿಗೆ ಪುರಸ್ಕಾರ ನೀಡಿದ್ದು ವಿಶೇಷ. ವರ್ಷಕ್ಕೆ 2 ತಿಂಗಳು ನಡೆಸುವ ಒಂದು ಆಲೆಮನೆಯಲ್ಲಿ ಬೆಲ್ಲ ತಯಾರಿಸಲು 150 ಟನ್ ಕಟ್ಟಿಗೆ ಬೇಕಾಗುತ್ತಿತ್ತು. ಕಟ್ಟಿಗೆ ರಹಿತ ಆಲೆಮನೆ ಕಾರ್ಯಕ್ರಮವನ್ನು ಶಿರಸಿ, ಸಿದ್ಧಾಪುರ ತಾಲೂಕಗಳಲ್ಲಿ 10 ಸ್ಥಳಗಳಲ್ಲಿ  ಅಳವಡಿಸಿದ್ದರಿಂದ 1500 ಟನ್ ಕಟ್ಟಿಗೆ ಕಡಿಯುವುದು ತಪ್ಪಿದೆ. 1500-2000 ವೃಕ್ಷಗಳ ಸಂರಕ್ಷಣೆ ಸಾಧ್ಯವಾಗಿದೆ ಎಂದು ವೃಕ್ಷ-ಲಕ್ಷ ಸಮೀಕ್ಷೆ ತಿಳಿಸಿದೆ.

**ಕುಮಾರಧಾರಾ :** ಪುತ್ತೂರಿನಲ್ಲಿ ಕುಮಾರಧಾರ ಪರಿಸರ ಪರಿಸ್ಥಿತಿ ಕುರಿತು ರಾಜ್ಯಮಟ್ಟದ ಕಾರ್ಯಾಗಾರವನ್ನು ಸುಬ್ರಹ್ಮಣ್ಯದ ಪೂಜ್ಯ ಸ್ವಾಮೀಜಿ ಉದ್ಘಾಟಿಸಿದರು. (6-6-2013 ) ಭಾರತೀಯ ವಿಜ್ಞಾನ ಸಂಸ್ಥೆ ಕೈಗೊಂಡ ಕುಮಾರಧಾರ ಅಧ್ಯಯನ ವರದಿಯನ್ನು ಶ್ರೀ ಅನಂತ ಅಶೀಸರ ಬಿಡುಗಡೆ ಮಾಡಿದರು. ವಿಜ್ಞಾನಿ ಡಾ। ಟಿ.ವಿ ರಾಮಚಂದ್ರ, ಮಂಗಳೂರು ವಿಶ್ವ ವಿದ್ಯಾಲಯದ ವಿಜ್ಞಾನಿ ಡಾ। ಕೃಷ್ಣ ಕುಮಾರ್ ಪಾಲ್ಗೊಂಡು ತಜ್ಞ ಉಪನ್ಯಾಸ ನೀಡಿದರು. ಕುಮಾರಧಾರ ಪರಿಸರ ಸಂರಕ್ಷಣಾ ಸಮಿತಿ ಎಂಬ ಪರಿಸರ ಸಂಘಟನೆ ಪುತ್ತೂರು - ಸುಳ್ಯ ಪ್ರದೇಶದಲ್ಲಿ ಜಾಗೃತಿ ಕಾರ್ಯ ನಡೆಸುತ್ತಿದೆ.

**ಫಲವೃಕ್ಷ ಮೇಳ :** ಸಾಗರದಲ್ಲಿ ಮಲೆನಾಡು ಫಲವೃಕ್ಷ ಮೇಳ ಜೂನ್ 15ರಂದು ನಡೆಯಿತು. ಪ್ರಯೋಗಶೀಲ ಕೃಷಿಕ ಶ್ರೀ ನಾಗೇಂದ್ರ ಸಾಗರ, 'ಹಲಸು' ಮೌಲ್ಯವರ್ಧನೆ ತಜ್ಞೆ ಮಮತಾ ಅವರನ್ನು ಸನ್ಮಾನಿಸಿದ್ದು ವಿಶೇಷ. 5000 ಹಣ್ಣಿನ ಸಸಿಗಳನ್ನು ರೈತರು ಖರೀದಿಸಿದ್ದು ಉಲ್ಲೇಖನೀಯ.

**ಹಕ್ಕೊತ್ತಾಯ :** ಜುಲೈ 8 ರಂದು ಕಾರವಾರದಲ್ಲಿ ಜಿಲ್ಲಾಧಿಕಾರಿ, ಜಿಲ್ಲಾ ಆರೋಗ್ಯ ಅಧಿಕಾರಿಗಳ ಜೊತೆ ಕೈಗಾ ಆರೋಗ್ಯ ಸಮೀಕ್ಷೆ, ಭಟ್ಕಳ ಎಂಡೋ ಸಲ್ಫಾನ ಪೀಡಿತರ ಸಮಸ್ಯೆ ಸಿ.ಆರ್.ಜಡ್ ಕಾಯಿದೆ ಪರಿಹಾರದ ಬಗ್ಗೆ  ಚರ್ಚಿಸಿದ ಜಿಲ್ಲಾ ಪರಿಸರ ಸಮಿತಿ ರಾಜ್ಯದ ಮುಖ್ಯ ಮಂತ್ರಿಗಳಿಗೆ ವಿಶೇಷ ಮನವಿಯನ್ನು ಜಿಲ್ಲಾಧಿಕಾರಿ ಮೂಲಕ ಸಲ್ಲಿಸಿತು. ಬಜೆಟ್‌ನಲ್ಲಿ ಕರಾವಳಿ ಹಸಿರು ಕವಚ, ದೇವರ ಕಾಡು ಯೋಜನೆಗಳಿಗೆ ಅನುದಾನ ನೀಡಿ ಎಂಬ ಹಕ್ಕೊತ್ತಾಯ ಮಂಡಿಸಲಾಯಿತು.

**ಮುಂಗಾರು ಉತ್ಸವ :** ಜೂನ್ 20 ರಂದು ಶಿರಸಿ ತಾ। ಭೈರುಂಬೆಯಲ್ಲಿ ಮುಂಗಾರು ಪರಿಸರ ಉತ್ಸವವನ್ನು ಭೈರುಂಬೆ ಶ್ರೀ ಶಾರದಾಂಬಾ ಗ್ರಾಮೀಣ ಅಭಿವೃದ್ಧಿ ಮತ್ತು ಶಿಕ್ಷಣ ಸಂಸ್ಥೆ ನೇತೃತ್ವದಲ್ಲಿ ಜಿಲ್ಲೆಯ ಪರಿಸರ ಸಂಸ್ಥೆಗಳು ಜಂಟಿಯಾಗಿ ಏರ್ಪಡಿಸಿದ್ದವು. ಹಸಿರು ಸ್ವಾಮೀಜಿ ಎಂದೇ ಪ್ರಸಿದ್ಧಿ ಪಡೆದ ಪೂಜ್ಯ ಸ್ವರ್ಣವಲ್ಲೀ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಪರಿಸರವಾದಿ ಶ್ರೀ ವಾಸಂತಿ ಹೆಗಡೆ ಇವರಿಗೆ ವೃಕ್ಷಲಕ್ಷ್ಯ ಪರಿಸರ ಪ್ರಶಸ್ತಿ ನೀಡಿ ಗೌರವಿಸಿದರು. ಹಿರಿಯ ಪತ್ರಕರ್ತ ಶ್ರೀ ನಾಗೇಶ ಹೆಗಡೆ ಅವರು ಡಾ। ಸುಭಾಸ್ ಚಂದ್ರನ್ ಅಧ್ಯಯನಕಾರ ಶ್ರೀ ಬಾಲಚಂದ್ರ ಸಾಯಿಮನೆ, ನರಸಿಂಹ ವಾನಳ್ಳಿ, ನರೇಂದ್ರ ಹೊಂಡಗಾಸಿ, ದಿವಾಕರ ಹೆಗಡೆ  ಶ್ರೀ ಶಾಂತಾರಾಂ ಸಿದ್ಧಿ ಮುಂತಾದವರಿಗೆ ಅಭಿನಂದನೆ ನೀಡಿದರು. ಶ್ರೀ ಅನಂತ ಹೆಗಡೆ ಅಶೀಸರ ಹಸಿರು ಶಾಲೆ ಯೋಜನೆ ಉದ್ಘಾಟಿಸಿದರು. ಆಕಾಶವಾಣಿ ಧಾರವಾಡ ನಿರ್ದೇಶಕರಾದ ಶ್ರೀ ಸಿ.ಯು.ಬೆಳ್ಳಕ್ಕಿ ಇವರು ಹಸಿರು ದಿಗಂತ ಎಂಬ ಪರಿಸರ ಅಭಿವೃದ್ಧಿ ಚಟುವಟಿಕೆಗಳ ಮಾಹಿತಿ ಪುಸ್ತಕ ಬಿಡುಗಡೆ ಮಾಡಿದರು.



'ಹಸಿರು ಶಾಲೆ' ಉದ್ಘಾಟನೆ



ಖ್ಯಾತ ಪರಿಸರ ವಿಜ್ಞಾನಿ ಡಾ। ಮಾಧವ ಗಾಡ್ಗೀಳ್ ಅವರು ಶಿರಸಿಗೆ ಬಂದಾಗ ಪರಿಸರ ಕಾರ್ಯಕರ್ತರ ಜೊತೆ ಸಮಾಲೋಚನೆ






ಬಯೋಗ್ಯಾಸ್ ಸ್ಥಾವರ ನಿರ್ಮಾಣ



ಮುಂಡಿಗೆಕೆರೆ ಪಕ್ಷಿಧಾಮ ಎಂದು ಘೋಷಿಸಿ



ಬೆಟ್ಟ ಅಭಿವೃದ್ಧಿಗೆ ಚಾಲನೆ.



ಮುಂಡಿಗೆಜಡ್ಡಿ ಅಧ್ಯಯನ ಶಿಬಿರ

**ಅರಣ್ಯ ಪರಿಸ್ಥಿತಿ ವರದಿ :** ಜುಲೈ 1 ರಂದು ಶಿವಮೊಗ್ಗಾದಲ್ಲಿ ಶಿವಮೊಗ್ಗ ಜಿಲ್ಲೆಯ ಅರಣ್ಯ ಜೀವ ಸಂಕುಲ ಪರಿಸ್ಥಿತಿ ಅಧ್ಯಯನ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ಜಿಲ್ಲಾ ಅರಣ್ಯ ಅಧಿಕಾರಿಗಳಿಗೆ ನೀಡಿ ಈ ವರದಿಯ ಜಾರಿಗೆ ಗಮನ ನೀಡಿ ಎಂದು ಆಗ್ರಹ ಮಾಡಲಾಯಿತು. ಭಾರತೀಯ ವಿಜ್ಞಾನ ಸಂಸ್ಥೆಯ ಡಾ। ಟಿ. ವಿ ರಾಮಚಂದ್ರ ತಂಡ ಅಧ್ಯಯನ ಮಾಡಿತ್ತು. ಪ್ರೋ। ಬಿ. ಎಂ. ಕುಮಾರ ಸ್ವಾಮಿ, ಡಾ। ರಾಮಚಂದ್ರ, ಶ್ರೀ ಅನಂತ ಹೆಗಡೆ ಅಶೀಸರ ಮುಂತಾದವರು ಇದ್ದರು.



ವೃಕ್ಷಲಕ್ಷ್ಯ ಪ್ರಶಸ್ತಿ ಪ್ರದಾನ

**ಬಯೋಗ್ಯಾಸ್ ನಿರ್ಮಾಣ :** ಬಯೋಗ್ಯಾಸ್ ನಿರ್ಮಾಣ ಕುರಿತು ಒಂದು ದಿನದ ಕಾರ್ಯಾಗಾರ ಶಿರಸಿಯಲ್ಲಿ 1-8-2013ರಂದು ನಡೆಯಿತು. ಶಕ್ತಿ ತಜ್ಞರಾದ ಶ್ರೀ ವಾಯ್.ಬಿ. ರಾಮಕೃಷ್ಣ, ಡಾ। ಶ್ರೀಪತಿ, ಶಾಸಕರಾದ ಶ್ರೀವಿಶ್ವೇಶ್ವರ ಹೆಗಡೆ ಪಾಲ್ಗೊಂಡ ಶಿಬಿರದಲ್ಲಿ ಉತ್ತರ ಕನ್ನಡ ಜಿಲ್ಲೆಯ ವಿವಿಧ ಪಟ್ಟಣಗಳ ಹೊಟೆಲ್ ಉದ್ಯಮಿಗಳು, ಪರಿಸರ ಆರೋಗ್ಯ ಅಧಿಕಾರಿಗಳು ಪಾಲ್ಗೊಂಡರು. ಬಯೋಗ್ಯಾಸ್ ನಿರ್ಮಾಣದಿಂದ ತ್ಯಾಜ್ಯ ವಿಲೇವಾರಿಗೆ ಸಹಾಯ, ಇಂಧನ ಉಳಿತಾಯ ಸಾಧ್ಯವಾಗಿದೆ ಎಂದು ಈಗಾಗಲೇ ಬಯೋಗ್ಯಾಸ್ ಪ್ರಯೋಗ ಮಾಡಿರುವ ಹೊಟೆಲ್ ಮತ್ತು ಶಿಕ್ಷಣ ಸಂಸ್ಥೆಗಳು ತಿಳಿಸಿದವು. ಪರಿಸರವರ್ಧಿನಿ, ವೃಕ್ಷಲಕ್ಷ ಈ ಕಾರ್ಯಾಗಾರ ಏರ್ಪಡಿಸಿದ್ದವು.



ಬೆಂಗಳೂರಿನಲ್ಲಿ ಪಶ್ಚಿಮಘಟ್ಟ ಉಳಿಸಿ ಸಭೆ

**ಸೌರಗ್ರಾಮ :** ಕಾರ್ಗಡಿ ಹೊಸನಗರದಲ್ಲಿ ದಿನಾಂಕ: 2-8-2013 ರಂದು ಜಿಲ್ಲಾ ಪರಿಸರ ಸಮಾವೇಶ ಗ್ರಾಮಭಾರತಿ ಆಶ್ರಯದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಹನಿಯ ಸೌರಗ್ರಾಮ ಉದ್ಘಾಟನೆ, ಬಯೋಗ್ಯಾಸ್ ಸ್ಥಾವರ ಉದ್ಘಾಟನೆ ನಡೆದವು. ಪರಿಸರ ತಜ್ಞರು ಗೋಷ್ಠಿಗಳಲ್ಲಿ ಮಾರ್ಗದರ್ಶನ ನೀಡಿದರು.

**ಗಣೇಶ ಪಾಲ್ ಜಲಪಾತ ಉಳಿಸಿ ಛಳುವಳಿ :** 10-6-2013 ರಂದು ಗಣೇಶ ಪಾಲ್ ಜಲಪಾತ ಬಳಿ (ಶಿರಸಿ ತಾ।) ಮಿನಿ ಜಲವಿದ್ಯುತ್ ಅಣೆಕಟ್ಟು ನಿರ್ಮಾಣ ವಿರೋಧಿಸಿ ಜಡ್ಡಿಗದ್ದೆಯಲ್ಲಿ ಬೃಹತ್ ಪ್ರತಿಭಟನಾ ಸಭೆ ನಡೆಯಿತು. ವೃಕ್ಷಲಕ್ಷ ಆಂದೋಲನದ ಸ್ವತಂತ್ರ ಪರಿಸರ ಪರಿಣಾಮ ವರದಿ ಮಂಡಿಸಲಾಯಿತು.



ಗಣೇಶಪಾಲ್ ಜಲಪಾತ ಉಳಿಸಿ

**ಡಾ। ಮಾಧವ್ ಗಾಡ್ಗೀಳ್ ಅವರಿಗೆ ಸನ್ಮಾನ :** ಜುಲೈ 22 ರಂದು ಖ್ಯಾತ ಪರಿಸರ ವಿಜ್ಞಾನಿ ಡಾ। ಮಾಧವ್ ಗಾಡ್ಗೀಳ್ ಅವರ ಜೊತೆ ಶಿರಸಿಯಲ್ಲಿ ಪರಿಸರ ಕಾರ್ಯಕರ್ತರು ಸಂವಾದ ನಡೆಸಿದರು. ಕಾಲೇಜು ವಿದ್ಯಾರ್ಥಿಗಳಿಗೆ ಡಾ। ಗಾಡ್ಗೀಳ್ ಪರಿಸರ ಪಾಠ ನಡೆಸಿ ಕೊಟ್ಟರು. ಪಶ್ಚಿಮ ಘಟ್ಟದ ಪರಿಸರ ಸಂಘ-ಸಂಸ್ಥೆಗಳ ಪರವಾಗಿ ಶ್ರೀ ಶ್ರೀ ಸ್ವರ್ಣವಲ್ಲೀ ಸ್ವಾಮೀಜಿ ಡಾ। ಗಾಡ್ಗೀಳ್ ಅವರಿಗೆ ಸನ್ಮಾನ ಮಾಡಿದರು.

**ಕಾನು ಅರಣ್ಯ ರಕ್ಷಿಸಿ :** ಜುಲೈ 26 ರಂದು ಬೆಂಗಳೂರಿನಲ್ಲಿ ರಾಜ್ಯ ಅರಣ್ಯ ಮಂತ್ರಿ ಶ್ರೀ ರಮಾನಾಥ ರೈ ಅವರಿಗೆ ವೃಕ್ಷಲಕ್ಷ ಆಂದೋಲನ ಹಲವು ಬೇಡಿಕೆಗಳನ್ನು ನೀಡಿತು. "ಸಂರಕ್ಷಿತ ಪ್ರದೇಶ ನಿರ್ವಹಣಾ ಯೋಜನೆ ಜಾರಿ ಮಾಡಿ, ಶಿವಮೊಗ್ಗ ಅರಣ್ಯ ಅಧ್ಯಯನ ವರದಿಯ ತಜ್ಞ ಸಲಹೆಗಳ ಪ್ರಕಾರ ಕಾನು ಅರಣ್ಯ ರಕ್ಷಣೆಗೆ ಮುಂದಾಗಿ, ಪಶ್ಚಿಮಘಟ್ಟದಲ್ಲಿ ಮಿನಿ ಹೈಡೆಲ್ ಯೋಜನೆ ರದ್ದು ಮಾಡಿ" ಮುಂತಾದ ಹಕ್ಕೊತ್ತಾಯ ಮಂಡಿಸಲಾಯಿತು.

**ಬೆಟ್ಟದಲ್ಲಿ ವೃಕ್ಷಾರೋಪಣ :** 4-8-2013 ರಂದು ಬೆಟ್ಟ ಅಭಿವೃದ್ಧಿ ಕಾರ್ಯಕ್ರಮ ತಟ್ಟೀಸರ ಗ್ರಾಮದಲ್ಲಿ ನಡೆಯಿತು. ನೂರಾರು ಜನ ರೈತರು ಬೆಟ್ಟದಲ್ಲಿ ಗಿಡನೆಟ್ಟರು. ಶಾಸಕರು, ಜಿಲ್ಲಾಪಂಚಾಯತ್ ತಾಲೂಕಾ ಪಂಚಾಯತ ಸದಸ್ಯರು ಪಾಲ್ಗೊಂಡರು. ಯಲ್ಲಾಪುರ ತಾಲೂಕಿನಲ್ಲಿ ಬೆಟ್ಟದಲ್ಲಿ ಗಿಡನೆಡಿ ಕಾರ್ಯಕ್ರಮ ನಡೆಯಿತು. ಬಿಸ್ಲಕೊಪ್ಪದಲ್ಲಿ 300 ಎನ್.ಎಸ್.ಎಸ್ ವಿದ್ಯಾರ್ಥಿಗಳು ಹಳ್ಳಿಗರ ಜೊತೆ 6000 ಗಿಡ ನೆಟ್ಟರು. ಶಾಸಕ ಶಿವರಾಂ ಹೆಬ್ಬಾರ್, ಅರಣ್ಯ ಕಾಲೇಜಿನವರು, ಹೈಸ್ಕೂಲ್‌ನವರು ಪಾಲ್ಗೊಂಡರು. ಪ್ರಧಾನ ಅರಣ್ಯ ಸಂರಕ್ಷಣಾ ಅಧಿಕಾರಿ ಶ್ರೀ ದೀಪಕ್ ಶರ್ಮಾ ಅವರು ಬೊಮ್ಮನಳ್ಳಿ ಬೆಟ್ಟ ಅಭಿವೃದ್ಧಿ ವೀಕ್ಷಣೆ ಮಾಡಿ ರೈತರ ಜೊತೆ ಸಮಾಲೋಚನೆ ನಡೆಸಿದರು (13-9-2013). ಭಾನ್ಕುಳಿ, ಇಟಗಿಯಲ್ಲಿ ಬೆಟ್ಟ ಅಭಿವೃದ್ಧಿ ಕಾರ್ಯಕ್ರಮ ನಡೆಯಿತು. (30-9-2013).

**ಹಲಸು :** ಹಲಸು ವೃಕ್ಷಾರೋಹಣ ಅಭಿಯಾನ ಜುಲೈ ತಿಂಗಳಲ್ಲಿ ಸಾಗರದ ವರದಳ್ಳಿ, ಸೊರಬ, ಹೊಸನಗರಗಳಲ್ಲಿ ಉತ್ತರ ಕನ್ನಡ, ಶಿವಮೊಗ್ಗಾ, ಗಳಲ್ಲಿ ವ್ಯಾಪಕವಾಗಿ ನಡೆಯಿತು. 148000 ಹಲಸಿನ ಸಸಿಗಳನ್ನು ರೈತರು ನೆಟ್ಟರು. ಕಸಿ ತರಬೇತಿ ಶಿಬಿರಗಳು 6 ಸ್ಥಳಗಳಲ್ಲಿ ನಡೆದವು.

**ಬಯೋಗ್ಯಾಸ್:** 13-9-2013ರಂದು ಬಯೋಗ್ಯಾಸ್ ಸ್ಥಾವರ ಉದ್ಘಾಟನೆ ಸೋಂದಾ ಸ್ವರ್ಣವಲ್ಲೀ ಮಠದಲ್ಲಿ ಸಚಿವರಾದ ಶ್ರೀ. ಎಚ್. ಕೆ ಪಾಟೀಲವರಿಂದ ನೆರವೇರಿತು. ಬಯೋಗ್ಯಾಸ್ ಯಶಸ್ವೀ ಪ್ರಯೋಗವನ್ನು 24-9-2013 ರಂದು ಎಂ.ಇ.ಎಸ್ ಕಾಲೇಜು ಶಿರಸಿ ಇಲ್ಲಿ ಜನತೆಗೆ, ವಿದ್ಯಾರ್ಥಿಗಳಿಗೆ ತೋರಿಸಲಾಯಿತು. 1000 ವಿದ್ಯಾರ್ಥಿಗಳ ಬಿಸಿ ಊಟದ ಅಡಿಗೆ ತ್ಯಾಜ್ಯದಿಂದ ಇಲ್ಲಿ ಬಯೋಗ್ಯಾಸ್ ಉತ್ಪಾದನೆ ಮಾಡಲಾಗುತ್ತಿದೆ.

(4ನೇ ಪುಟಕ್ಕೆ)



ಸೌರಗ್ರಾಮ
ಬೊಮ್ಮನಳ್ಳಿ



ಬೆಳ್ಳಂಬರ ಗೌಡರಿಗೆ
ಸನ್ಮಾನ

## ಅಗಸಾಲ ಬೊಮ್ಮನಳ್ಳಿ ವಿ.ಎಫ್.ಸಿ ಸಾಧನೆ

(1ನೇ ಪುಟದಿಂದ)

**ವಿ.ಎಫ್.ಸಿ ಗೆ ಸನ್ಮಾನ :** ಭೈರುಂಬೆಯಲ್ಲಿ ನಡೆದ ಜಿಲ್ಲಾಮಟ್ಟದ ಮುಂಗಾರು ಪರಿಸರ ಉತ್ಸವದಲ್ಲಿ ಅಗಸಾಲ – ಬೊಮ್ಮನಳ್ಳಿ ಗ್ರಾಮ ಅರಣ್ಯ ಸಮಿತಿಗೆ ಸನ್ಮಾನ ಮಾಡಿದ್ದು, ಹೇಳಲೇಬೇಕು. ಹದಿಹರೆಯದ ವಿದ್ಯಾರ್ಥಿಗಳಿಗೆ ಆಪ್ತಸಲಹೆ ನೀಡುವ ಕಾರ್ಯಕ್ರಮಕ್ಕೆ ಈ ಹಳ್ಳಿಗೆ ಹುಬ್ಬಳ್ಳಿಯ ಖ್ಯಾತಮಾನಸಿಕ ವೈದ್ಯ ಡಾ। ಶ್ರೀನಿವಾಸ್ ಕುಲಕರ್ಣಿ ಬಂದರು. ಅರಣ್ಯ ಇಲಾಖೆ ರಾಜ್ಯ ಮುಖ್ಯಸ್ಥರು ಭೇಟಿ ನೀಡಿದರು. ಅರಣ್ಯ ಸಮಿತಿ ಸಾಧನೆ ಸಮೀಕ್ಷಿಸಲು ರಾಜ್ಯದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾ ಅಧಿಕಾರಿ ಶ್ರೀ ದೀಪಕ್ ಶರ್ಮಾ, ಉನ್ನತ ಅಧಿಕಾರಿ ಶ್ರೀ ಶಿವನಗೌಡ ಹಲವರು ಬಂದರು. **ಹಸಿರು ಹಬ್ಬಗಳು:** ಹಲಸು ವೃಕ್ಷಾರೋಪಣ, ಕಸಿ ತರಬೇತಿ, ಬೆಟ್ಟ ಅಭಿವೃದ್ಧಿ ಹೀಗೆ ಗ್ರಾಮದ ಹಸಿರು ಹಬ್ಬಗಳ ಪಟ್ಟಿ ದೊಡ್ಡದಿದೆ.

**ಸಾಧನೆಯ ಪಟ್ಟಿ :** ಅರಣ್ಯ ಕಳ್ಳ ಸಾಗಾಣಿಕೆ ತಡೆ, ವನೀಕರಣ, ವನ್ಯಜೀವಿ ಬೇಟೆ ತಡೆ, ಜಲ ಸಂವರ್ಧನೆಗೆ ಕಾಯಕ, ಶಿವರಾತ್ರಿ ಯಂದು ವಿದ್ಯಾರ್ಥಿ ಯುವ ಜನತೆಗಾಗಿ ಪರ್ವತಾರೋಹಣ, ಮಕ್ಕಳ ಬೇಸಿಗೆ ನಿಸರ್ಗ ಶಿಬಿರ, ಹೀಗೆ **ವಿ.ಎಫ್.ಸಿ**ಯ ಸಾಧನೆಯ ಪಟ್ಟಿ ದೊಡ್ಡದಿದೆ. "ಕೈಲಾಸಗುಡ್ಡ ರಕ್ಷಿಸೋಣ ಬನ್ನಿ" ಎಂಬ ನಾಮಫಲಕದ ಮೂಲಕ ಈ ಗ್ರಾಮದ ಯುವಕರು ನಿಮ್ಮನ್ನು ಸ್ವಾಗತಿಸುತ್ತಾರೆ. ಕೈಲಾಸ ಗುಡ್ಡದ ರಕ್ಷಣೆಗೆ ಗ್ರಾಮದ ಯುವಕರು ಕೈಗೊಂಡ ರಕ್ಷಾ ಕ್ರಮಗಳು ಒಂದೊಂದಾಗಿ ನಿಮಗೆ ಕಾಣಸಿಗುತ್ತವೆ.

**ಕಾರ್ಯಕರ್ತರ ತಂಡ :** ಈ **ವಿ.ಎಫ್.ಸಿ**ಯ ಅಧ್ಯಕ್ಷ ಶ್ರೀ ವಿಶ್ವನಾಥ ಹೆಗಡೆ ಬುಗಡಿಮನೆ, ಶ್ರೀಮತಿ ವಸುಮತಿ ಗಡಿಗೆಹೊಳೆ, ಶ್ರೀ ನರಸಿಂಹ ಬೊಮ್ಮನಳ್ಳಿ, ಅಗಸಾಲದ ಶ್ರೀಕಾಂತ್, ಶ್ರೀಮತಿ ನಿರ್ಮಲಾ, ರಾಮಚಂದ್ರ ದೇವರಕೇರಿ ಹೀಗೆ ಕಾರ್ಯಕರ್ತರ ತಂಡ ದೊಡ್ಡದಿದೆ.

**ಗ್ರಾಮದ ಏಕತೆ :** ಗ್ರಾಮದಲ್ಲಿ ಏಕತೆ, ಸಾಮರಸ್ಯ ಮೂಡಿಸಲು, ಗ್ರಾಮದ ಸುಸ್ಥಿರ ಅಭಿವೃದ್ಧಿಯಲ್ಲಿ ಜನರನ್ನು ತೊಡಗಿಸಲು **ವಿ.ಎಫ್.ಸಿ** ಮಾಡಿದ ಸಂಯೋಜಿತ ಕಾರ್ಯ ಮಹತ್ವದ್ದು. ಗ್ರಾಮದ ಯುವಕರ ಸಂಘ, ಶಾಲಾಭಿವೃದ್ಧಿ ಸಮಿತಿ, ಡೇರಿ ಸೊಸೈಟಿ, ಮಹಿಳಾ ಸಮಾಜ, ಸ್ವಸಹಾಯ ಸಂಘ, ಜನ ಪ್ರತಿನಿಧಿಗಳನ್ನೆಲ್ಲ ಕೂಡಿಸಿ ಹಲವು ವಿಕಾಸ ಕಾರ್ಯಕ್ರಮಗಳಲ್ಲಿ ತೊಡಗಿಸುವ ಪ್ರಯತ್ನ ಶ್ಲಾಘನೀಯ, ರಾಜ್ಯಕ್ಕೇ ಮಾದರಿ. ಪಶ್ಚಿಮಘಟ್ಟ ಕಾರ್ಯಪಡೆ, ಅರಣ್ಯ ಇಲಾಖೆ, ವೃಕ್ಷಲಕ್ಷ ಆಂದೋಲನ ಇವರ ಮಾರ್ಗದರ್ಶನ ಬೆಂಬಲ **ವಿ.ಎಫ್.ಸಿ** ಅಗಸಾಲ ಬೊಮ್ಮನಳ್ಳಿಗೆ ಸಿಕ್ಕಿದೆ.

**ವಿ.ಎಫ್.ಸಿ ಹಮ್ಮಿಕೊಳ್ಳಲು ಉದ್ದೇಶಿಸಿರುವ ಇನ್ನಷ್ಟು ಕಾರ್ಯಕ್ರಮಗಳು :**

ತಾಲೂಕಾ ಮಟ್ಟದ ಪರಿಸರ ಕಾರ್ಯಕರ್ತರ ಸಭೆ, ವಿದ್ಯಾರ್ಥಿಗಳಿಂದ ನದೀಗುಂಟ ಪರಿಸರ ಅಧ್ಯಯನ, ಕಾಡಿನ ಜೇನು ಸಂರಕ್ಷಣೆ, ಜಲಸಂವರ್ಧನಾ ಯೋಜನೆ, ಔಷಧಿ ಸಸ್ಯ ಬೆಳೆಸುವುದು ಅರಣ್ಯ ಜನ ಸಂಪರ್ಕ ಸಭೆ ಇತ್ಯಾದಿ.

## ಪಶ್ಚಿಮ ಘಟ್ಟದ ವಾರ್ತೆ

(3ನೇ ಪುಟದಿಂದ)

**ಹಸಿರು ಆರೋಗ್ಯ:** 29-10-2013 ರಂದು ಅಗಸಾಲ ಬೊಮ್ಮನಳ್ಳಿ ಗ್ರಾಮದಲ್ಲಿ ಹಸಿರು ಆರೋಗ್ಯ ಶಿಬಿರ ಜಿಲ್ಲಾಮಟ್ಟದಲ್ಲಿ ನಡೆಯಿತು. 225 ಮಹಿಳೆಯರು, ಪುರುಷರು ಶಿಬಿರದ ಪ್ರಯೋಜನ ಪಡೆದರು.

ಆಕಾಶವಾಣಿಯಲ್ಲಿ **ಹಸಿರು ಹೆಜ್ಜೆ** ಎಂಬ ಕಾರ್ಯಕ್ರಮ ಸರಣಿ ಜೂನ್ ತಿಂಗಳಿನಿಂದ ಪ್ರಸಾರವಾಗುತ್ತಿದೆ.

**ಬೆಂಗಳೂರಿನಲ್ಲಿ ಸಭೆ:** 27-8-2013 ರಂದು ಮಿನಿಹೈಡೆಲ್ ಡ್ಯಾಂ ಮತ್ತು ಪಶ್ಚಿಮಘಟ್ಟ ಕುರಿತು ಸಮಾಲೋಚನಾ ಸಭೆ ಬೆಂಗಳೂರಿನಲ್ಲಿ ನಡೆಯಿತು. ಡಾ। ವಾಮನ್ ಆಚಾರ್ಯ, ಶ್ರೀ ಅನಂತ ಹೆಗಡೆ ಅಶೀಸರ, ಡಾ। ಟಿ. ವಿ ರಾಮಚಂದ್ರ, ಶ್ರೀ ಲಿಯೊಸಾಲ್ಡಾನಾ ಹಾಗೂ ಹೈಕೋರ್ಟ ವಕೀಲರಾದ ಶ್ರೀ ಶಂಕರ್ ಭಟ್, ಶ್ರೀ ರಾಘವೇಂದ್ರ ಭಾಗವಹಿಸಿದ್ದರು.

**ಮೀನುಗಾರರ ಪಾರ್ಶ್ವವಾಯು ಸಮಸ್ಯೆ:** 14-8-2013 ರಂದು ಭಟ್ಕಳದ ಮಾವಿನ ಕುರ್ವಾ ಬಂದರ್ ಗ್ರಾಮದಲ್ಲಿ ಪಾರ್ಶ್ವವಾಯು ಪೀಡಿತರ ಸಮಸ್ಯೆ ಪರಿಹಾರ ಕುರಿತು ಸಮಾಲೋಚನಾ ಸಭೆ ಪಂಚಾಯತ್ ಸಭಾಭವನದಲ್ಲಿ ನಡೆಯಿತು. ಮಣಿಪಾಲ್ ತಜ್ಞರ ವರದಿಯನ್ನು ತಾಲೂಕಿನ ವೈದ್ಯಾಧಿಕಾರಿಗಳು ಮಂಡಿಸಿದರು. ಮೀನುಗಾರರ ಪಾರ್ಶ್ವ ವಾಯು ರೋಗ ತಡೆಗೆ ಚಿಕಿತ್ಸೆಗೆ ವಿಶೇಷ ಪ್ಯಾಕೇಜ್ ನೀಡಬೇಕೆಂದು ವೃಕ್ಷಲಕ್ಷ ಆಂದೋಲನ ಸರ್ಕಾರಕ್ಕೆ ಪತ್ರ ಬರೆದಿದೆ.

**ಸಸ್ಯ ಲೋಕ ವಿದ್ಯಾರ್ಥಿ ಶಿಬಿರ:** 3-9-2013ರಂದು ಸಸ್ಯ ಲೋಕದಲ್ಲಿ ಶಿರಸಿ ತಾಲೂಕಿನ 28 ಹೈಸ್ಕೂಲ್‌ನ ಶಿಕ್ಷಕರು, ವಿದ್ಯಾರ್ಥಿಗಳ ಜೀವವೈವಿಧ್ಯ ಅಧ್ಯಯನ ಶಿಬಿರ ನಡೆಯಿತು. ಡಾ। ವಾಸುದೇವ, ಶ್ರೀ ಬಾಲಚಂದ್ರ ಸಾಯಿಮನೆ ಶಿಕ್ಷಣ ಅಧಿಕಾರಿಗಳು, ಅರಣ್ಯ ಅಧಿಕಾರಿಗಳು ಭಾಗವಹಿಸಿದ್ದರು. ಪೂಜ್ಯ ಸ್ವರ್ಣವಲ್ಲಿ ಶ್ರೀ ಸಾನ್ನಿಧ್ಯವಹಿಸಿದ್ದರು.

**ಕಾಡಿನ ಜೇನು:** 12-10-2013ರಂದು ಯಲ್ಲಾಪುರದಲ್ಲಿ ಮಲೆನಾಡು ಹೆಜ್ಜೇನು ಸುಸ್ಥಿರ ಕೊಯ್ಲು ಕಾರ್ಯಾಗಾರ ನಡೆಯಿತು. ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯದವರು, ಕದಂಬ ಸಂಸ್ಥೆಯವರು, ವನವಾಸಿಗಳು, ರೈತರು ಅರಣ್ಯ ತೋಟಗಾರಿಕಾ ಇಲಾಖೆ ಮುಂತಾದವರು ಭಾಗವಹಿಸಿದ್ದರು. ಕಾಡಿನ ಜೇನು ಸಂರಕ್ಷಣೆ ಅಭಿಯಾನ ಮುಂದುವರೆಸಲು ನಿರ್ಧರಿಸಲಾಯಿತು.

**ಪಶ್ಚಿಮ ಘಟ್ಟದ ಗಡಿ:** ಪಶ್ಚಿಮಘಟ್ಟ ವ್ಯಾಪ್ತಿ, ಗಡಿ, ನಕಾಶೆ ಕುರಿತು ಸರ್ಕಾರ ಆದೇಶ ಹೊರಡಿಸಬೇಕು ಎಂದು ಬೆಂಗಳೂರಲ್ಲಿ 26-10-2013ರಂದು ಪತ್ರಿಕಾ ಗೋಷ್ಠಿ ಮೂಲಕ ಆಗ್ರಹ ಮಾಡಲಾಯಿತು.

17-10-2013ರಂದು ಶಿವಮೊಗ್ಗ ಜಿಲ್ಲಾಧಿಕಾರಿಗಳ ಮೂಲಕ ಪಶ್ಚಿಮಘಟ್ಟ ಉಳಿಸಿ ಎಂಬ ಹಕ್ಕೊತ್ತಾಯ ಮಾಡಲಾಯಿತು. ಶರಾವತಿ, ಬೇಡ್ತಿ, ಅಘನಾಶಿನಿ ನದಿ ತಿರುವು ಯೋಜನೆ ಕೈಗೊಳ್ಳಬಾರದು ಎಂದು ಆಗ್ರಹ ಮಾಡಲಾಯಿತು.

**ರಾಜ್ಯದಲ್ಲೇ ಮೊದಲ ಶಿಬಿರ:** 31-10-2013ರಂದು ಕೇದಿಗೆ, ಮುಂಡಿಗೆ ಜಡ್ಡಿ ಸಂರಕ್ಷಣೆ ಕುರಿತು ಸೋಂದಾ ಮುಂಡಿಗೆ ಕೆರೆ ಪಕ್ಷಿಧಾಮದಲ್ಲಿ ತಜ್ಞರು, ರೈತರು, ವಿದ್ಯಾರ್ಥಿಗಳ ಶಿಬಿರ ನಡೆಯಿತು. ರಾಜ್ಯದಲ್ಲಿ ಮೊದಲ ಬಾರಿಗೆ ಮುಂಡಿಗೆ ಜಡ್ಡಿ ಬಗ್ಗೆ ಅಭ್ಯಾಸ ಶಿಬಿರ ನಡೆದದ್ದು ವಿಶೇಷ.